ಶ್ರೀ ಡಿ.ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ ೧೯೮೧ನೇ ಇಸವಿಯಿಂದ ಶಾಸಕರಿಗೆ ಒಂದು ಸೈಟನ್ನು ಸಹ ಕೊಡಲಿಲ್ಲ ಏಕೆ ? ಶಾಸಕರ ಗೃಹನಿರ್ಮಾಣ ಸಹಕಾರ ಸಂಘ ಇದೆ. ಆದರೂ ಸಹ ಒಂದು ಸೈಟನ್ನೂ ಹಂಚಿಕೆ ಮಾಡಿಲ್ಲ ಕಾರಣವೇನು ?

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ೧೯೮೧ನೇ ಇಸವಿಯಿಂದ ಶಾಸಕರಿಗೆ ಸುಮಾರು ಒಂದೂ ನೂರು ಸೈಟ್‌ಗಳನ್ನು ಹಂಚಲಾಗಿದೆ. ಈಗ ಸುಮಾರು ೫೦ಳ ಸೈಟ್‌ಗಳನ್ನು ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಇಲ್ಲಿ ಎರಡು ಸಹಕಾರ ಸಂಘಗಳು ಇವೆ. ಒಂದು ಶಾಸಕರ ಗೃಹನಿರ್ಮಾಣ ಸಂಘ ಆದಕ್ಕೆ ಶ್ರೀಮಾನ್ ನಾಣಯ್ಯನವರು ಅಧ್ಯಕ್ಷರೂ ಇನ್ನೊಂದಕ್ಕೆ ಶ್ರೀ ನಾರಾಯಣರಾವ್‌ರವರು ಅಧ್ಯಕ್ಷರು. ಈ ಎರಡೂ ಸಹಕಾರ ಸಂಘಗಳಿಗೆ ಸುಮಾರು ೫೦ಳ ನಿವೇಶನಗಳನ್ನು ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಇನ್ನು ಒಂದು ತಿಂಗಳಲ್ಲಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಡಿ.ಎ. ಚಿನ್ನಪ್ಪ.—ಅಂತರರಾಷ್ಟ್ರೀಯ ವರ್ಷವೆಂದು ಕೇಂದ್ರ ಸರ್ಕಾರದವರು ಸುಮಾರು ೧೦೦ ಕೋಟಿ ರೂಪಾಯಿಗಳನ್ನು ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಗೆ ಕೊಟ್ಟಿದ್ದಾರೆ. ಆದರಲ್ಲಿ ಬಿ. ಡಿ. ಎ.ಗೆ ಏನಾದರೂ ಹಣ ಕೊಟ್ಟಿದ್ದಾರೆಯೇ ? ಕೊಟ್ಟಿದ್ದರೆ ಎಷ್ಟು ಹಣ ಕೊಟ್ಟಿದ್ದಾರೆ ?

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಕೇಂದ್ರ ಸರ್ಕಾರದವರು ಹಣ ಬಿಡುಗಡೆ ಮಾಡಿದ್ದರೆ ಅದು ನಮಗೆ ಸಂಬಂದವಿಲ್ಲ. ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದಿಂದ ಯಾರು ಅರ್ಜಿಯನ್ನು ಹಾಕಿರುತ್ತಾರೋ ಅವರಿಗೆ ಗುಣ ಮಟ್ಟ ನೋಡಿ ನಿವೇಶನ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಕೇಂದ್ರ ಸರ್ಕಾರದಿಂದ ನಮಗೆ ಯಾವುದೇ ಹಣ ಬಂದಿಲ್ಲ.

ಶ್ರೀ ಡಿ.ಎ ಚಿನ್ನಪ್ಪ,—ಕೆಲವು ಜನರಿಗೆ ಸೈಟ್‌ಗಳನ್ನು ಕೊಟ್ಟಿದ್ದೀರಿ. ಹಣ ಕೂಡ ವಾಪಸ್ ಮಾಡಿದ್ದೀರಿ ? ಇದು ನಿಜವೇ?

ಶ್ರೀ ಎಂ.ಪಿ. ಪ್ರಕಾಶ್.—ನಿವೇಶನಗಳನ್ನು ಪಡೆದುಕೊಂಡವರಿಗೆ ಹಣ ವಾಪಸ್ ಮಾಡತಕ್ಕಂಥ ಪದ್ಧತಿ ಇಲ್ಲ. ಒಂದು ವೇಳೆ ಆಜಾತುರ್ಯದಿಂದ ಏನಾದರೂ ಆ ರೀತಿ ಆಗಿದ್ದರೆ ಕ್ರಮ ತೆಗೆದು ಕೊಳ್ಳುತ್ತೇವೆ. ಶಾಸಕರೇ ಆಗಲಿ, ಯಾರೇ ಆಗಲಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು),—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಮಂಡಿಸಲಾಯಿತು.

ರಾಜ್ಯದಲ್ಲಿ ನೀಡಿರುವ ಜನತಾ ಮನೆಗಳು

೧೧೫೫. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ೧೯೮೪-೮೫, ೧೯೮೬-೮೭ ಹಾಗೂ ೧೯೮೭-೮೮ನೇ ಸಾಲಿಗೆ ಸರ್ಕಾರ ಎಷ್ಟು ಜನತಾ ಮನೆಗಳನ್ನು ಮಂಜೂರು ಮಾಡಿದೆ ಪ್ರತಿ ಸಾಲಿನಲ್ಲಿ ಪೂರ್ಣಗೊಂಡಿರುವ ಮನೆಗಳೆಷ್ಟು ಹಾಗೂ ಅಪೂರ್ಣಗೊಂಡಿರುವ ಮನೆಗಳೆಷ್ಟು ?

ಆ) ೧೯೮೪-೮೫ ರಿಂದಲೂ ಈ ಬಾಬ್ತಿನ ಮನೆಗಳಿಗಾಗಿ ಹಣ ನೀಡಬೇಕಾಗಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ಇದುವರೆವಿಗೂ ಕೊಡದಿರಲು ಕಾರಣವೇನು ?